# ರಾಜಕಾರಣದ ಸತ್ಯಪಥ

ಪ್ರತಿ ಸಾಹಿತ್ಯ ಸಮ್ಮೇಳನದಲ್ಲಿ ಮತ್ತೆ ಮತ್ತೆ ಕೇಳಿಬರುವ ಟೀಕೆಯ ಮಾತೆಂದರೆ ‘ರಾಜಕಾರಣಿಗಳು ಅಕ್ಷರ ಶತ್ರುಗಳು’ ಎಂಬುದು. ಈಗಿನ ಸಂದರ್ಭದಲ್ಲಿ ಈ ಟೀಕೆಯನ್ನು ಸಂಪೂರ್ಣವಾಗಿ ನಿರಾಕರಿಸಲಾಗದು! ಇದರ ನಡುವೆಯೇ ಕರ್ನಾಟಕವನ್ನೂ ಒಳಗೊಂಡು ಭಾರತದ ಕೆಲವೇ ರಾಜಕಾರಣಿಗಳು ಈ ಮಾತಿಗೆ ಅಪವಾದವಾಗಿ ಕಾಣುತ್ತಾರೆ. ಜವಹರಲಾಲ್ ನೆಹರೂ, ರಾಮಮನೋಹರ ಲೋಹಿಯಾ, ಬಾಬಾ ಸಾಹೇಬ್ ಅಂಬೇಡ್ಕರ್ ಇವರೊಂದಿಗೆ ಗಾಂಧೀಜಿಯವರನ್ನೂ ಸೇರಿಸಿಕೊಳ್ಳೋಣ. ಇವರೆಲ್ಲಾ ರಾಜಕಾರಣಿಗಳಾಗಿ ಎಷ್ಟು ಪ್ರಸಿದ್ಧರೋ, ಅಷ್ಟೇ ಪ್ರಖರ ಚಿಂತನೆಯ ಲೇಖಕರೂ ಆಗಿದ್ದರು ಎನ್ನುವುದು ಸರ್ವವಿದಿತ. ನೆಹರೂ ಅವರ ‘ಭಾರತ ದರ್ಶನ’, ‘ಮಗಳಿಗೆ ಅಪ್ಪ ಬರೆದ ಪತ್ರಗಳು’ ಈ ಕೃತಿಗಳು ಓದುಗರ ಅರಿವನ್ನು ಹೊಸಯಿಸುತ್ತವೆ. ಗಾಂಧೀಜಿ ಅವರ ‘ಹಿಂದ್ ಸ್ವರಾಜ್’ ಕೃತಿಯಂತೂ ಲೋಕಪ್ರಸಿದ್ಧಿ ಪಡೆದಿದೆ. ಇನ್ನು ಲೋಹಿಯಾ ಮತ್ತು ಬಾಬಾ ಸಾಹೇಬ್ ಅವರ ಸಮಗ್ರ ಕೃತಿಗಳು ಭಾರತವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಹೇಗೆ ನೋಡಬೇಕು ಎನ್ನುವುದನ್ನು ಕಲಿಸುತ್ತವೆ. ಭಾರತದಲ್ಲಿ ಹಾಸುಹೊಕ್ಕಾಗಿರುವ ಜಾತಿಪದ್ಧತಿ, ಇತಿಹಾಸ ಮತ್ತು ಪುರಾಣಗಳ ಬಗ್ಗೆ ಅಪೂರ್ವವಾದ ಒಳನೋಟಗಳನ್ನು ನೀಡುವ ಈ ಮುತ್ಸದ್ದಿಗಳ ಕೃತಿಗಳು ಜನಪ್ರತಿನಿಧಿಗಳು ಹಾಗೂ ಸಮಾಜ ಬದಲಾವಣೆಯ ತುಡಿತ ಇರುವವರ ಪಾಲಿಗೆ ಪಠ್ಯದಂತಿವೆ. ಇವರ ಚಿಂತನೆಗಳು ಜಡಗೊಂಡ ಸಮಾಜ ಮತ್ತು ರಾಜಕಾರಣದ ಪುನರುಜ್ಜೀವನಕ್ಕೆ ಸಂಜೀವಿನಿಯಂತಿವೆ. ಗಾಂಧಿ, ನೆಹರೂ, ಲೋಹಿಯಾ, ಅಂಬೇಡ್ಕರ್ ಆಳವಾದ ವಿದ್ವತ್‌ಅನ್ನು ಹೊಂದಿದ್ದ ಸಂವೇದನಾಶೀಲ ಬರಹಗಾರರೂ ಹೌದು. ಹಾಗೆಯೇ ಜನತೆಯ ವಿಮೋಚನೆಗೆ ತುಡಿಯುತ್ತಿದ್ದ ರಾಜಕಾರಣಿಗಳೂ ಹೌದು. ಇಂತಹ ಮೇಧಾವಿಗಳ ಕೃತಿಗಳನ್ನು ಓದದವನು ಭಾರತದಲ್ಲಿ ರಾಜಕಾರಣಿಯಾಗಿ ಯಶಸ್ವಿಯಾಗಲಾರ ಎಂಬುದಂತೂ ಈಚೆಗೆ ಅಕ್ಷರಶಃ ನಿಜವಾಗುತ್ತಿದೆ.

ರಾಜಕಾರಣ ಎನ್ನುವುದು ಇಂದು ಎಲ್ಲ ಬಗೆಯ ದಮನಕಾರಿ ಶಕ್ತಿಗಳ ಸಮರ್ಥನೆ ಹಾಗೂ ನಿರ್ಣಾಯಕ ಸನ್ನಿವೇಶಗಳಲ್ಲಿ ‘ಮೌನ’ ವಹಿಸುವಂತಾಗಬಾರದು! ಸಮಷ್ಟಿಯ ಬದುಕನ್ನು ಹಸನುಗೊಳಿಸುವುದೇ ರಾಜಕೀಯ ಧರ್ಮ. ಪ್ರಭುತ್ವಗಳು ಜಡತೆಯಲ್ಲಿದ್ದಾಗ ಸೂಕ್ಷ್ಮ ಮನಸ್ಸಿನ ಜನಪ್ರತಿನಿಧಿಗಳು ಹಾಗೂ ಬರಹಗಾರರ ಚಿಂತನೆಗಳು ಪ್ರಭುತ್ವವನ್ನು ಜಾಗೃತಗೊಳಿಸಿ, ಸಮಾಜವನ್ನು ಉಳಿಸುವಲ್ಲಿ ಪ್ರಾಣವಾಯುವಿನಂತೆ ನೆರವಾಗುತ್ತವೆ. ಗಾಂಧಿ, ಲೋಹಿಯಾ, ಅಂಬೇಡ್ಕರ್ ಅವರ ಚಿಂತನೆಗಳು ಈಗಲೂ ನಮ್ಮ ಸಮಾಜದ ದೋಣಿಯನ್ನು ಮುನ್ನಡೆಸುವ ಹರಿಗೋಲಾಗಿವೆ. ಕರ್ನಾಟಕದಲ್ಲಿಯೂ ಸಮಾಜ, ಸಾಹಿತ್ಯ ಮತ್ತು ಸಂಸ್ಕೃತಿಗಳ ವಿನ್ಯಾಸಗಳನ್ನು ಬಲ್ಲವರಾಗಿದ್ದ ರಾಜಕಾರಣಿಗಳ ಹಾಗೂ ಬರಹಗಾರರ ಪರಂಪರೆಯೂ ಇದೆ. ಕುವೆಂಪು, ದೇವರಾಜ ಅರಸು, ಶಾಂತವೇರಿ ಗೋಪಾಲಗೌಡ, ಎಂ.ಡಿ. ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಲಂಕೇಶ್, ಡಿ.ಆರ್. ನಾಗರಾಜ್, ದೇವನೂರ ಮಹಾದೇವ ಮುಂತಾದವರು ಕಾಲ ಕಾಲಕ್ಕೆ ಮತೀಯತೆ ಮತ್ತು ಜಾತಿವಾದಕ್ಕೆ ಸವಾಲೆಸೆಯುವಂತೆ ಸಾಮಾಜಿಕ ಪರಿವರ್ತನೆಯ ಚಿಂತನೆಗಳನ್ನು ಸಮಾಜದ ಮುಂದೆ ಮಂಡಿಸಿದ್ದ ಸೂಕ್ಷ್ಮಗ್ರಾಹಿಗಳು. ಬರಹಗಾರನ ಗುಣದ ಜೊತೆಗೆ ರಾಜಕಾರಣದ ಸಂವೇದನೆಯೂ ಇವರಲ್ಲಿ ಆಳವಾಗಿ ಬೆಸೆದುಕೊಂಡಿತ್ತು. ನಿಜವಾದ ಬರಹಗಾರರು, ಚಿಂತಕರು, ಹೋರಾಟಗಾರರು ಯಾವಾಗಲೂ ಪ್ರವಾಹಕ್ಕೆ ವಿರುದ್ಧವಾಗಿಯೇ ಈಜುತ್ತಾರೆ. ಎಲ್ಲ ಬಗೆಯ ಅಧಿಕಾರ ಕೇಂದ್ರಗಳಿಂದ ದೂರವಿದ್ದ ಇಂತಹ ಲೇಖಕರು ಪ್ರಭುತ್ವದ ಜೊತೆ ಎಂದಿಗೂ ಹೊಂದಾಣಿಕೆ ಮಾಡಿಕೊಂಡಿರಲಿಲ್ಲ! ಪ್ರಭುತ್ವಗಳೂ ಸತ್ಯಪಥದಿಂದ ದೂರ ಉಳಿದಾಗಲೆಲ್ಲ ಅದನ್ನು ನಿರ್ಭೀತಿಯಿಂದ ಟೀಕಿಸುವ ನೈತಿಕ ಗುಣ ಇವರಲ್ಲಿತ್ತು.

ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಅವರು 1979ರಲ್ಲಿ ಧರ್ಮಸ್ಥಳದಲ್ಲಿ ನಡೆದ 51ನೇ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಭಾಷಣ ಮಾಡುತ್ತಾ ಹೇಳಿದ್ದ ಮಾತುಗಳು ಇಂದಿಗೂ ಪ್ರಸ್ತುತವಾಗುತ್ತವೆ. ‘ಧರ್ಮ ಈ ಶಬ್ದವನ್ನು ನಾನು ಸಂಕುಚಿತ ಅರ್ಥದಲ್ಲಿ ಬಳಸುತ್ತಿಲ್ಲ. ಜಾತ್ಯತೀತ ಸಾಮಾಜಿಕ ಜೀವನ ಪದ್ಧತಿಯನ್ನೇ ನಾನು ಧರ್ಮವೆಂದು ತಿಳಿಯುತ್ತೇನೆ. ಅದೇ ಸರ್ವೋಯ ಧರ್ಮ... ಶೋಷಣೆಗೆ ಒಳಗಾದವರ ಬಗೆಗೆ ಪ್ರತಿಯೊಬ್ಬರಲ್ಲಿ ಅನುಕಂಪ ಮೂಡಿಬರಬೇಕು. ಕೇವಲ ಶಾಬ್ದಿಕ ಸಹಾನುಭೂತಿ, ಫಲ ಕೊಡದ ಬಂಜರು ಭೂಮಿಯಂತೆ ಎಂಬ ಅರಿವು ಜನ ಸಾಮಾನ್ಯರಲ್ಲಿ ಮೂಡಿಬರಬೇಕು. ಒಂದು ಕಡೆ ಅಧ್ಯಾತ್ಮವಾದ — ಇನ್ನೊಂದು ಕಡೆ ಭೌತಿಕವಾದ ಈ ಎರಡು ತೀವ್ರಗಾಮಿಗಳ ತಿಕ್ಕಾಟದಲ್ಲಿ ಹೊಸದೊಂದು ಜೀವನಮೌಲ್ಯ ಅಸ್ತಿತ್ವದಲ್ಲಿ ಬರುವ ಸಾಧ್ಯತೆ ಇದ್ದೇ ಇದೆ. ವಿವೇಕಾನಂದರು ಅಧ್ಯಾತ್ಮವಾದಿಗಳಾಗಿದ್ದರೂ ಸಾಮಾಜಿಕ ಹಿತಕ್ಕಾಗಿ, ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವುದಕ್ಕಾಗಿ ತಮ್ಮ ಅಧ್ಯಾತ್ಮವನ್ನು ಒಂದು ಸಾಧನವನ್ನಾಗಿ ಬಳಸಿಕೊಂಡದ್ದು ಒಂದು ಅದ್ಭುತವೇ ಸರಿ. ಕೇವಲ ಗೊಡ್ಡು — ಹಾಗೂ ಅರ್ಥಹೀನ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುವವರಲ್ಲಿ ಮಾನಸಿಕ ಔದಾರ್ಯತೆ ಬೆಳೆಯುವುದು ಸಾಧ್ಯವೇ ಇಲ್ಲ. ಯಾವುದೇ ಒಂದು ಭಾಷೆಯನ್ನು ಒತ್ತಾಯದಿಂದ ಹೇರುವುದು ಎಷ್ಟರಮಟ್ಟಿಗೆ ಯೋಗ್ಯವಾದೀತು? ನಾವು ಹಿಂದಿಯನ್ನು ದ್ವೇಷಿಸುವುದಿಲ್ಲ, ಹಾಗೆಯೇ ಯಾವ ಭಾಷೆಯನ್ನೂ ದ್ವೇಷಿಸುವುದಿಲ್ಲ. ಆದರೆ ಹಿಂದಿಯನ್ನು ಕಲಿಯದೇ ಇರುವುದು, ದೇಶಪ್ರೇಮದ ಅಭಾವ ಎಂದು ಕರೆಯುವುದು ಅಷ್ಟೊಂದು ಸೂಕ್ತವೆನಿಸಲಾರದು’ ಅರಸು ಅವರ ಈ ಭಾಷಣ ಶುದ್ಧಾಂಗವಾಗಿ ರಾಜಕೀಯ ಮಾತುಗಳಾಗಿರದೆ, ಸಮಗ್ರ ಕರ್ನಾಟಕದ ಬದುಕನ್ನು ಉನ್ನತಿಗೇರಿಸುವ ಸಾಮಾಜಿಕ ನ್ಯಾಯ, ಸಮಾನತೆಯ ಬಗೆಗೆ ಇರುವ ಗೌರವ ಮತ್ತು ಕಾಳಜಿಗಳ ಕುರುಹುಗಳನ್ನು ಒಳಗೊಂಡಿತ್ತು.

ಇದೇ ಬಗೆಯಾಗಿ ಕನ್ನಡ ಸಾಹಿತ್ಯ ಪರಂಪರೆಯ ಸೂಕ್ಷ್ಮ ಓದುಗರಾಗಿದ್ದ ಶಾಂತವೇರಿ ಗೋಪಾಲಗೌಡ ಅವರ ರಾಜಕೀಯ ಚಿಂತನೆ ಮತ್ತು ಹೋರಾಟ ಕುವೆಂಪು ಅವರ ಆದರ್ಶವಾದ ‘ಸರ್ವರಿಗೂ ಸಮಬಾಳು; ಸರ್ವರಿಗೂ ಸಮಪಾಲು’ ಒದಗಿಸುವುದೇ ಆಗಿತ್ತು. ಕರ್ನಾಟಕದ ಸಾಮಾಜಿಕ ಚಲನೆಗೆ ನಾಂದಿ ಹಾಡಿದ ಚಾರಿತ್ರಿಕ ಹೋರಾಟವಾಗಿದ್ದ ‘ಕಾಗೋಡು ರೈತ ಸತ್ಯಾಗ್ರಹ’ ಈ ನಾಡಿನಲ್ಲಿ ‘ಉಳುವವನೆ ಹೊಲದೊಡೆಯ’ ಶಾಸನ ಕಾರ್ಯಗತವಾಗಲು ಕಾರಣವಾಯಿತು. ಅರಸು, ಗೋಪಾಲಗೌಡ ಮುಂತಾದ ಬೆರಳೆಣಿಕೆಯ ರಾಜಕಾರಣಿಗಳಲ್ಲಿ ಲೇಖಕನಿಗಿರಬೇಕಾದ ಸೂಕ್ಷ್ಮತೆಗಳೂ ಇದ್ದವು. ಇದು ಕರ್ನಾಟಕ ರಾಜಕಾರಣದ ಸೌಂದರ್ಯ.

ಜನಪ್ರತಿನಿಧಿಗಳಿಗೆ ರಾಜಕಾರಣವೆನ್ನುವುದು ಸಾಮಾಜಿಕ ನ್ಯಾಯ, ಸಮಾನತೆಯ ಆದರ್ಶಗಳನ್ನು ಕಾರ್ಯರೂಪಕ್ಕೆ ತರುವ ಸತ್ಯಪಥ. ಹೀಗಲ್ಲದೆ ಇರುವ ಜನಪ್ರತಿನಿಧಿಗಳನ್ನು ಸಾಮಾಜಿಕ ಮತ್ತು ರಾಜಕೀಯ ಸತ್ಯಪಥದಿಂದ ಹೊರಗಿರುವವರು ಎಂದೇ ಭಾವಿಸಬೇಕಾಗುತ್ತದೆ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನಮ್ಮನ್ನು ಪ್ರೀತಿಸುವವರಿದ್ದಾರೆ ಎನ್ನುವ ನಂಬಿಕೆಯೇ ಜೀವನದ ಅತ್ಯಂತ ಹೆಚ್ಚಿನ ಸುಖ.
  —ವಿಕ್ಟರ್ ಹ್ಯೂಗೊ
- ಯಾವಾಗ ಮೌನದಿಂದಿರಬೇಕು ಎಂಬುದನ್ನು ತಿಳಿಯದವನಿಗೆ ಯಾವಾಗ ಮಾತನಾಡಬೇಕು ಎಂಬುದೂ ತಿಳಿಯುವುದಿಲ್ಲ.
  —ಪಿ. ಸೈರಸ್
- ಸುಖವನ್ನು ಸಹಿಸುವ ಶಕ್ತಿ ಒಬ್ಬನಿಗಿದ್ದರೆ ದುಃಖವನ್ನು ಸಹಿಸುವ ಶಕ್ತಿ ನೂರಾರು ಮಂದಿಗಿರುತ್ತದೆ.
  —ಥಾಮಸ್ ಕಾರ್ಲೈಲ್
- ನಮ್ಮ ಗುಣಗಳ ನೆರಳೇ ನಮ್ಮ ಲೋಕಗಳು.
  —ಎಮರ್ ಸನ್
- ಕೋಪವನ್ನು ನಿಯಂತ್ರಿಸದಿದ್ದರೆ ಅದು ನಮ್ಮ ಮನಸ್ಸಿನ ಜ್ಯೋತಿಯನ್ನು ನಂದಿಸಿಬಿಡುತ್ತದೆ.
  —ಇಂಗರ್ ಸಾಲ್
- ಸದ್ಗುಣ ಮತ್ತು ದುರ್ಗುಣಗಳ ವ್ಯತ್ಯಾಸ ತಿಳಿಯದೆ ಹೋದಾಗ ನಮ್ಮ ಬೆಳವಣಿಗೆ ನಿಲ್ಲುತ್ತದೆ.
  —ಮಹಾತ್ಮ ಗಾಂಧಿ